## ತಪ್ಪದೇ ಫೈರ್‌ಫಾಕ್ಸ್ ಅಪ್‌ಡೇಟ್ ಮಾಡಿ

ಫೈರ್‌ಫಾಕ್ಸ್ ಬ್ರೌಸಿಂಗ್ ತಂತ್ರಾಂಶವನ್ನೂ ಫೈರ್‌ಫಾಕ್ಸ್ 67.0.3ಗೆ ಈ ಕೂಡಲೇ ಅಪ್‌ಡೇಟ್ ಮಾಡಿಕೊಳ್ಳುವಂತೆ ಮೊಝಿಲ್ಲಾ ತನ್ನ ಬಳಕೆದಾರರಿಗೆ ಸೂಚನೆ ರವಾನಿಸಿದೆ.

ಮೊಝಿಲ್ಲಾ ಫೈರ್‌ಫಾಕ್ಸ್ ಬಳಕೆದಾರರ ಸಂಖ್ಯೆ ಸುಮಾರು 50 ಕೋಟಿಗೂ ಅಧಿಕ. ತನ್ನ ಎಲ್ಲ ಬಳಕೆದಾರರಿಗೆ ಹಳೆಯ ಫೈರ್‌ಫಾಕ್ಸ್ ವರ್ಷನ್ 67.0.2 ಬದಲಿಗೆ ಹೊಸ 67.0.3 ಅಪ್‌ಡೇಟ್ ಬಿಡುಗಡೆ ಮಾಡಲಾಗಿದೆ. ಭದ್ರತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ತಕ್ಷಣ ಅಪ್‌ಡೇಟ್ ಮಾಡಿಕೊಳ್ಳುವಂತೆಯೂ ಎಚ್ಚರಿಸಿದೆ.

ಹಳೆಯ ಆವೃತ್ತಿಯಲ್ಲಿದ್ದ ಬಗ್ ಒಂದನ್ನು ಬಳಸಿಕೊಂಡು ಸೈಬರ್ ದಾಳಿ ನಡೆಸಲು ಹ್ಯಾಕರ್‌ಗಳು ಸಜ್ಜಾಗಿರುವ ಸಾಧ್ಯತೆ ಇರುವುದರಿಂದ ಸಮಸ್ಯೆಯನ್ನು ಸರಿಪಡಿಸಿ ಹೊಸ ಅಪ್‌ಡೇಟ್ ಆವೃತ್ತಿಯನ್ನು ಬಿಡುಗಡೆ ಮಾಡಿದೆ. ಒಂದು ವೇಳೆ ಅಪ್‌ಡೇಟ್ ಮಾಡಿಕೊಳ್ಳದಿದ್ದರೆ ಹ್ಯಾಕರ್‌ಗಳು ಸೈಬರ್ ದಾಳಿ ನಡೆಸಿ ಬಳಕೆದಾರರ ಮಾಹಿತಿಗೆ ಕನ್ನ ಹಾಕುವ ಸಾಧ್ಯತೆ ಇದೆ.

## ಬರಲಿದೆ ಪಬ್‌ಜಿ ಲೈಟ್

ಗೇಮಿಂಗ್ ಕ್ಷೇತ್ರದಲ್ಲಿ ಹೊಸ ಛಾಪು ಮೂಡಿಸಿರುವ ಪಬ್‌ಜಿ ಆ್ಯಪ್ ಯುವಮನಗಳ ನಿದ್ದೆಗೆಡಿಸಿದೆ. ಕುಂತರೂ ನಿಂತರೂ ಪಬ್‌ಜಿಯದ್ದೇ ಕನವರಿಕೆ. ಯುವಕರ ಮನದಲ್ಲಿ ಹುಚ್ಚು ಹಿಡಿಸಿರುವ ಈ ಆ್ಯಪ್‌ನ ಹೊಸ ಆವೃತ್ತಿಯೊಂದು ಸಿದ್ಧವಾಗಿದ್ದು, ಕೆಲ ದಿನಗಳಲ್ಲೇ ಅದು ಸ್ಮಾರ್ಟ್‌ಫೋನ್‌ಗಳಲ್ಲಿ ಬಳಕೆಗೆ ದೇಶದಲ್ಲಿ ಲಭ್ಯವಾಗಲಿದೆ.

ಪಬ್‌ಜಿಯ ಹೊಸ ಆವೃತ್ತಿಯ ಹೆಸರು ಪಬ್‌ಜಿ ಲೈಟ್. ಕಡಿಮೆ ರ್‍ಯಾಮ್, ಪ್ರೊಸೆಸರ್ ಮತ್ತು ಸ್ಟೋರೇಜ್ ಇರುವ ಮೊಬೈಲ್‌ಗಳಲ್ಲಿ ಇದನ್ನು ಸುಲಲಿತವಾಗಿ ಬಳಸಬಹುದು. ಆಸಕ್ತರು ಇದಕ್ಕೆ ರಿಜಿಸ್ಟ್ರೇಷನ್ ಮಾಡಿಕೊಳ್ಳಬೇಕಷ್ಟೇ. ಪಬ್‌ಜಿ ಲೈಟ್ ಬಗ್ಗೆ ಈ ಆ್ಯಪ್ ಒಡೆತನದ ಕಂಪನಿಯು ತನ್ನ ಫೇಸ್‌ಬುಕ್ ಖಾತೆಯಲ್ಲಿ ಅಧಿಕೃತವಾಗಿ ಪ್ರಕಟಿಸಿದೆ.

ಬೇರೆ ದೇಶಗಳಿಗೆ ಹೋಲಿಕೆ ಮಾಡಿಕೊಂಡರೆ ದೇಶದಲ್ಲಿ ಪಬ್‌ಜಿ ಬಳಕೆದಾರರ ಸಂಖ್ಯೆ ಕೋಟಿಗಟ್ಟಲೆ ಇದೆ. ಮತ್ತಷ್ಟು ಬಳಕೆದಾರರನ್ನು ಸೆಳೆಯುವ ಉದ್ದೇಶದಿಂದ ಈ ಆವೃತ್ತಿ ಪರಿಚಯಿಸಲಾಗುತ್ತಿದೆ. ಈಗಾಗಲೇ ಹಲವು ದೇಶದಲ್ಲಿ ಪಬ್‌ಜಿ ಲೈಟ್ ದೊರೆಯುತ್ತಿದ್ದು ಭಾರತದಲ್ಲಿ ಮಾತ್ರ ಲಭ್ಯವಿಲ್ಲ. ನೆರೆದೇಶಗಳಾದ ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ ಸಹಿತ ಏಷ್ಯಾದ ಬಹುತೇಕ ರಾಷ್ಟ್ರಗಳಿಗೆ ಕಾಲಿಡಲು ಸಜ್ಜಾಗುತ್ತಿದೆ.




## ಪೇಟಿಎಂನಲ್ಲೂ ಮೆಟ್ರೊ ಸೇವೆ



ಡಿಜಿಟಲ್ ಪೇಮೆಂಟ್ಸ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಪೇಟಿಎಂ ಆ್ಯಪ್‌ನಲ್ಲಿ ಇಷ್ಟು ದಿನ ವಿಮಾನ, ಬಸ್ ಮತ್ತು ರೈಲು ಟಿಕೆಟ್ ಖರೀದಿಸುವ ಹಾಗೂ ಅದರ ಸಂಪೂರ್ಣ ಮಾಹಿತಿ ಪಡೆಯುವ ಸೌಲಭ್ಯ ಮಾತ್ರ ಇತ್ತು. ಅದರ ಸಾಲಿಗೆ ಈಗ ಮೆಟ್ರೊ ಸೇವೆಯೂ ಸೇರಿಕೊಂಡಿದೆ. ಪೇಟಿಎಂ ಆ್ಯಪ್‌ನಲ್ಲಿ ಈಗ ಮೆಟ್ರೊ ರೂಟ್ ಸರ್ಚ್ ಆಪ್ಷನ್ ಕಲ್ಪಿಸಲಾಗಿದ್ದು, ಇದರಿಂದ ಮೆಟ್ರೊ ಪ್ರಯಾಣಿಕರು ತಮ್ಮ ಪ್ರಯಾಣದ ಬಗ್ಗೆ ಕೆಲವೊಂದಿಷ್ಟು ಮಾಹಿತಿಗಳನ್ನು ಪಡೆಯಬಹುದಾಗಿದೆ.

ಒಂದು ಕಡೆಯಿಂದ ಮತ್ತೊಂದು ಕಡೆಗೆ ಇರುವ ಮೆಟ್ರೊ ಸೌಲಭ್ಯ ತಿಳಿಸುವುದಲ್ಲದೇ ಆ ಸ್ಥಳಕ್ಕೆ ತೆರಳಲು ಎಷ್ಟು ಸಮಯ ಬೇಕು, ಶುಲ್ಕ ಎಷ್ಟು ಹಾಗೂ ಎಷ್ಟು ಸ್ಟೇಷನ್‌ಗಳು ದಾಟಿ ಹೋಗಬೇಕು ಎಂಬ ಮಾಹಿತಿಯು ಇದರಲ್ಲಿ ಲಭ್ಯವಾಗುತ್ತದೆ. ಒಂದು ವೇಳೆ ಸಾಗುವ ಮಧ್ಯದಲ್ಲಿ ಇಳಿದು ಮತ್ತೊಂದು ರೂಟ್‌ನ ಮೆಟ್ರೊ ಹತ್ತಬೇಕಾದರೂ ಮಾಹಿತಿ ನೀಡುತ್ತದೆ.

ಇದಕ್ಕಾಗಿ ಪ್ರಯಾಣಿಕರು ಮಾಡಬೇಕಾದದ್ದು ಇಷ್ಟೆ. ಪೇಟಿಎಂ ಆಪ್‌ನಲ್ಲಿರುವ ಮೆಟ್ರೊ ಐಕಾನ್ ಕ್ಲಿಕ್ಕಿಸಿ ನಿಮ್ಮ ನಗರ ಆಯ್ಕೆ ಮಾಡಿ ರೂಟ್ ಸರ್ಚ್ ಮೇಲೆ ಕ್ಲಿಕ್ ಮಾಡಿ. ಬಳಿಕ ಎಲ್ಲಿಂದ ಎಲ್ಲಿಗೆ ಹೋಗಬೇಕು ಎಂಬ ವಿವರಗಳನ್ನು ನಮೂದಿಸಿ ಸರ್ಚ್ ಬಟನ್ ಒತ್ತಿದರೆ ವಿವರಗಳು ಸ್ಕ್ರೀನ್ ಮೇಲೆ ತೆರೆದುಕೊಳ್ಳುತ್ತವೆ.

ಪೇಟಿಎಂನಲ್ಲಿ ವಿಮಾನ, ಬಸ್ ಮತ್ತು ರೈಲು ಟಿಕೆಟ್‌ನ ರದ್ದತಿ ಸೌಲಭ್ಯ ಪರಿಚಯಿಸಲಾಗಿತ್ತು. ಯಾವುದೇ ರದ್ದತಿ ಶುಲ್ಕವಿಲ್ಲದೇ ಟಿಕೆಟ್ ರದ್ದುಗೊಳಿಸಬಹುದಾಗಿತ್ತು. ಲೈವ್ ಟ್ರೇನ್ ಟ್ರ್ಯಾಕಿಂಗ್, ಕ್ವಿಕ್ ಬುಕ್, ಹಾಗೂ ಧ್ವನಿ ಬಳಸಿ ಹುಡುಕಾಟದ ಸೌಲಭ್ಯಗಳು ಪೇಟಿಎಂನಲ್ಲಿ ಲಭ್ಯವಿದ್ದು, ಇವು ಸಾಕಷ್ಟು ಜನಪ್ರಿಯಗೊಂಡಿವೆ.

■ ಸಿರಿ